ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ :

'ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕದ ಭಾಗವಾಗಿರುತ್ತವೆ'

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ಹೆಸರು, ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಂಗೀಕಾರ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೬ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ :

'೧೯೮೬ನೇ ಇಸವಿಯ ಕರ್ನಾಟಕ ಅಭಿವೃದ್ಧಿ ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.'

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕಾಗಿ ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದು ಬಹಳ ಸರಳವಾದ ತಿದ್ದುಪಡಿ ವಿಧೇಯಕ ಈಗಾಗಲೇ ಸುಗ್ರೀವಾಜ್ಞೆ ಮೂಲಕ ಜಾರಿಯಲ್ಲಿರತಕ್ಕ ಕಾನೂನು ಇದು. ಇದಕ್ಕೆ ಶಾಸ್ತ್ರೀಯವಾದ ಚೌಕಟ್ಟನ್ನು ಮಾತ್ರ ಹಾಕಬೇಕಾಗಿದೆ. ಇದು ಮೃತರ ಕಣ್ಣುಗಳನ್ನು ತೆಗೆದು ಅಂಧರಾಗಿರತಕ್ಕ ಜನಗಳಿಗೆ ಜೋಡಿಸತಕ್ಕ ಕ್ರಿಯೆಗೆ ಸಂಬಂಧಪಟ್ಟ ತಿದ್ದುಪಡಿ ವಿಧೇಯಕ. ಇದರ ಮೂಲ ಕಲಂನಲ್ಲಿ ಇದ್ದ ಕೆಲವು ದೋಷಗಳನ್ನು ಸರಿಪಡಿಸತಕ್ಕದ್ದು ಆಗಿದೆ. ಮೊದಲು ಕಣ್ಣನ್ನು ತೆಗೆಯುವಾಗ ಇಬ್ಬರು ಸಾಕ್ಷಿಗಳು ಇರಬೇಕಾಗಿತ್ತು. ಈಗ ಒಬ್ಬರೇ ಸಾಕ್ಷಿ ಸಾಕು ಎಂದು ಮಾಡಿದ್ದೇವೆ. ಸಂಶೋಧನೆಗೆ ಕೂಡ ಆ ಕಣ್ಣನ್ನು ಉಪಯೋಗಿಸಿಕೊಳ್ಳಬಹುದು ಜೋಡಣೆಗೆ ಬೇಕಾದರೂ ಉಪಯೋಗಿಸಿಕೊಳ್ಳ ಬಹುದು ಎಂದು ಮಾಡಿದ್ದೇವೆ. ಈ ಸಂಬಂಧವಾಗಿ ಯಾರಾದರೂ ಮೊಕದ್ದಮೆ ಹೂಡುವುದಾದರೆ ಕಾನೂನಿನಲ್ಲಿ ಅವಕಾಶ ಮಾಡಿಕೊಡಕೂಡದು ಎಂಬುದು ಇದರ ಉದ್ದೇಶವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ಮಸೂದೆ ನಿಜವಾಗಿ ಸ್ವಾಗರ್ತಾವಾದುದು. ಆದರೆ ಡ್ರಾಫ್ಟಿಂಗ್‌ನಲ್ಲಿ ಮಿಸ್ಟೇಕ್ ಮಾಡಿದ್ದೀರಿ, ಅದನ್ನು ಸರಿ ಮಾಡಿಕೊಳ್ಳಬೇಕೆಂದು ಒಂದು ತಿದ್ದುಪಡಿ ಕಳುಹಿಸಿದ್ದೇನೆ. ಇವರು ಡ್ರಾಫ್ಟ್ ಮಾಡುವಾಗ ಕಿಡ್ನಿಗೆ ಸಂಬಂಧಪಟ್ಟ ವಿಧೇಯಕವನ್ನು ಫಾಲೋ ಮಾಡಬೇಕಾಗಿತ್ತು. ಇದರಲ್ಲಿ ಒಂದು ವಾಕ್ಯವನ್ನು ಮಾತ್ರ ಬಿಟ್ಟಿದ್ದಾರೆ. "Authority for removal of Cornea for grafting from unclaimed bodies. ಅಂತ ಇದೆ. ಅದನ್ನು ಸೇರಿಸಬೇಕಾಗಿತ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಕಿಡ್ನಿಗೆ ಸಂಬಂಧಪಟ್ಟ ವಿಧೇಯಕ ಮುಂದೆ ಬರುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ಇದರಲ್ಲಿ ಇನ್‌ಕ್ಲೂಡ್ ಮಾಡಬೇಕಾಗಿತ್ತು ಎಂದು ಹೇಳುತ್ತಿದ್ದೇನೆ. ಆದರಲ್ಲೇನು ಅನುಮಾನ ಇಲ್ಲ. I welcome that bill. We have to add the same Sentence in this bill.
Itreads :

Authority for removal of Cornea for grafting from unclaimed bodies—

> In the case of a body unclaimed or likely to remain unclaimed in an approved institution, any authority for removal of Cornea under this Act may be given on behalf of the person having the control or management of the approved Institution by any officer or person designated in that behalf by the first mentioned person.

ಎಂದು ಇದೆ. ಅದನ್ನು ಇನ್ನೊಂದು ಬಿಲ್‌ನಲ್ಲಿ ತಂದಿದ್ದಾರೆ. ಅದನ್ನು ಇದರಲ್ಲಿ ಸೇರಿಸಬೇಕಾಗಿತ್ತು. ಆನ್‌ಕ್ಲೈಮ್ಡ್ ಬಾಡಿ ಸಿಗುತ್ತದೆಂದು ಅದನ್ನು ಯುಟಿಲೈಸ್ ಮಾಡುವುದಕ್ಕೆ ಅವಕಾಶ ಇದೆ. ಅದನ್ನು ಬಿಟ್ಟಿದ್ದಾರೆ. ಅದನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ.—ಇಬ್ಬರು ಸಾಕ್ಷಿಗಳ ಬದಲಾಗಿ ಒಬ್ಬರೇ ಸಾಕು ಎಂದು ಮಾಡಿದ್ದಾರೆ ಆದರೆ ಸಾಕ್ಷಿ ಮೃತರ ಸಂಬಂಧಿಕರೇ ಇರಬೇಕೆಂದು ಹೇಳುತ್ತಾರೆ. ಆ ವೇಳೆಯಲ್ಲಿ ಸಂಬಂಧಿಕರು ಇಲ್ಲದಿದ್ದರೆ ಕಣ್ಣು ವ್ಯರ್ಥವಾಗುತ್ತದೆ. ಆದ್ದರಿಂದ ಯಾರಾದರೂ ಒಬ್ಬರು ಸಾಕ್ಷಿ ಇದ್ದರೆ ಸಾಕು ಎಂದು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನೀವು ಹೇಳಿದ್ದನ್ನೇ ಇಲ್ಲಿ ಆಳವಡಿಸಿರತಕ್ಕದ್ದು. ಬರವಣಿಗೆ ಮೂಲಕ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಬಹುದು. ಮೌಖಿಕವಾಗಿ ಹೇಳುವುದಾದರೆ ಇಬ್ಬರು ಬೇಕಾಗಿಲ್ಲ, ಒಬ್ಬರೇ ಇದ್ದರೆ ಸಾಕು.

ಶ್ರೀ ಕೆ. ಬಿ. ಕೋಳಿವಾಡ.—ಸಂಬಂಧಿಕರೇ ಇರಬೇಕೆಂದು ಇದೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸಾಯುವ ಕಾಲದಲ್ಲಿ ಅವರ ಹತ್ತಿರ ಇನ್ನು ಯಾರು ಇರುತ್ತಾರೆ ?

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :

"ರಿಟೇನ್ ಇಸವಿಯ ಕರ್ನಾಟಕ ಆಕ್ಷಿಪಟಲಗಳ ಜೋಡಣೆ (ತಿದ್ದುಪಡಿ)

ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—"ಖಂಡ ೨ ಮತ್ತು ೩ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ವಿಧೇಯಕ ಅಂಗವಾದವು)

೧–೩೦ ಪಿ. ಎಂ.

ಶ್ರೀ ಆರ್. ವೆಂಕಟರಾಮಯ್ಯ.—ಇದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆಂದು ಭಾವಿಸಿದ್ದೇನೆ.

ಅಧ್ಯಕ್ಷರು.—ಮಾನ್ಯ ಸಚಿವರು ತಿದ್ದುಪಡಿಯನ್ನು ಕೊಟ್ಟಿದ್ದಾರೆ. ತಿದ್ದುಪಡಿಯನ್ನು ಮಂಡಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಕರ್ನಾಟಕ ಬದಲಿ ಮೂತ್ರ ಪಿಂಡ ಜೋಡಣೆ ವಿಧೇಯಕ ಏಳನೇ ಕಲಮಿನಲ್ಲಿರುವಂಥಹದ್ದನ್ನು ಇದರಲ್ಲಿ ಸೇರಿಸಬೇಕು. ದಯವಿಟ್ಟು ಇದನ್ನು ಸೇರಿಸಿಕೊಳ್ಳಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅದನ್ನು ಪರಿಶೀಲನೆ ಮಾಡೋಣ.

ಅಧ್ಯಕ್ಷರು.—ತಾವು ಮುಂದಿಸಿರಿ.

ಖಂಡ—೪

ಶ್ರೀ ಹೆಚ್. ಟಿ. ಕೃಷ್ಣಪ್ಪ.—I beg to move -

"That in sub-clause (1), after item (b), the following shall be inserted, namely,"

"(c) in the Explanation, for the words, 'this clause' the words, 'this section', shall be substituted".

ಅಧ್ಯಕ್ಷರು.—ತಿದ್ದುಪಡಿಯನ್ನು ಮಂಡಿಸಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ತಿದ್ದುಪಡಿಯಲ್ಲಿ ಏನೂ ಕಾಂಟ್ರಾವರ್ಸಿ ಇಲ್ಲ. ಡ್ರಾಫ್ಟ್‌ನಲ್ಲಿ ಮಿಸ್ಟೇಕ್ ಇದೆ. ಅನ್‌ಕ್ಲೈಮ್ಡ್ ಬಾಡೀಸ್ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇನೆ. ಅದನ್ನು ತಾವು ಒಪ್ಪಿಕೊಳ್ಳುತ್ತೀರೋ ಇಲ್ಲವೋ ಹೇಳಿ ?

ಶ್ರೀ ಎ. ಲಕ್ಷ್ಮೀಸಾಗರ್.—ತಪ್ಪು ಇದ್ದರೆ ಸರಿ ಮಾಡಿಕೊಳ್ಳುತ್ತೇವೆ ಮತ್ತು ಅವರ ಸೂಚನೆಯನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಅಧ್ಯಕ್ಷರು.—ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಆಯಿತು.

(Amendment of Sri R. Venkata Ramiah was by the leave of the Hous withdrawn.)

ಅಧ್ಯಕ್ಷರು.—That in sub-clause (1), after item (b) the following shall be inserted namely.—

"(c) (in the expalnation, for the words, this clause, the words, this section, shall be substituted)"

(The Motion was adopted)

ಅಧ್ಯಕ್ಷರು.—"ಖಂಡ ೪ ತಿದ್ದುಪಡಿಯಾದಂತೆ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(೪ನೇ ಖಂಡವು ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟಿತು)

ಖಂಡ ೫ ರಿಂದ ೭

ಅಧ್ಯಕ್ಷರು.—"ಖಂಡ ೫ ರಿಂದ ೭ "ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೫ ರಿಂದ ೭ರ ವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಮೊದಲನೆಯ ಖಂಡ, ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಹೆಚ್. ಟಿ. ಕೃಷ್ಣಪ್ಪ.—''೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

''೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಬದಲಿ ಮೂತ್ರ ಪಿಂಡಗಳ ವಿಧೇಯಕ ೧೯೮೬,

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಬದಲಿ ಮೂತ್ರಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ, ೧೯೮೬ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಂಗೀಕಾರವಾಗಿರತಕ್ಕಂಥ ವಿಧೇಯಕದ ರೂಪರೇಷೆಗಳನ್ನು ಹೊಂದಿರತಕ್ಕಂಥದ್ದು ಇದು ಒಂದು ವಿಧೇಯಕ. ಇದೂ ಕೂಡ ಸುಗ್ರೀವಾಜ್ಞೆ ಮೂಲಕ ಈಗಾಗಲೇ ಜಾರಿಯಲ್ಲಿರತಕ್ಕಂಥದ್ದು. ಇದು ಸಶಕ್ತಿರತಕ್ಕಂಥ ಅಥವಾ ಸಾಯುವ ಸ್ಥಿತಿಯಲ್ಲಿರುವವರ ಮೂತ್ರ ಪಿಂಡಗಳನ್ನು ತೆಗೆದು ಯಾರು ಈ ರೋಗ ಗ್ರಸ್ಥರಾಗಿದ್ದಾರೆ, ಮತ್ತು ಮೂತ್ರ ಪಿಂಡಗಳ ಖಾಯಿಲೆಯಿಂದ ನರಳತಕ್ಕಂಥವರಿಗೆ ಜೋಡಿಸತಕ್ಕಂಥ ಸದುದ್ದೇಶ ಹೊಂದಿರತಕ್ಕಂಥ ಒಂದು ವಿಧೇಯಕ ಇದನ್ನು ಚರ್ಚೆ ಮಾಡತಕ್ಕಂಥ ವಿಷಯ ಇಲ್ಲ. ಅಕ್ಷಿಪಟಲಗಳ ನ್ಯೂನತೆಗಳನ್ನು ತಿದ್ದುಪಡಿ ಮೂಲಕ ಸರಿಪಡಿಸಿಕೊಳ್ಳುತ್ತೇವೆ. ಇದನ್ನು ಕೂಡ ತಾವು ಗಮನದಲ್ಲಿಟ್ಟುಕೊಂಡು ಇದಕ್ಕೂ ಕೂಡ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ''ಬದಲಿ ಮೂತ್ರಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ, ೧೯೮೬ನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ ೨ ರಿಂದ ೧೧ರ ವರೆಗೆ.—

ಅಧ್ಯಕ್ಷರು.—''ಖಂಡ ೨ ರಿಂದ ೧೧ ರವರೆಗೆ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೧೧ರ ವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ